

ಜಿಮ್ ಕಾರ್ಬೆಟ್ ಉದ್ಯಾನವನ





ಅದರ ಜತೆ ಸೇರಿಕೊಂಡಿತು. ಈಗಂತೂ ನಮ್ಮ ಕ್ಯಾಮೆರಾಗಳಿಗೆ ಬಿಡುವೇ ಇಲ್ಲ. 'ಪಟ ತೆಗೆದೆವು' ಎನ್ನುವುದಕ್ಕಿಂತ ಚೆನ್ನಾಗಿ ಚಚ್ಚಿಕೊಂಡೆವು ಎಂದರೆ ಸರಿಹೋದೀತು. ತಾಯಿ ಸಿಗದೆ ಅದರ ಅದರ ಎರಡು ಮರಿಗಳು ಪೋಸು ಕೊಟ್ಟವು. ಮಾರನೆಯ ದಿನ ಮತ್ತೆ ಬಂದು ಹುಡುಕಿದರೆ ಅವು ಅಲ್ಲಿರಲಿಲ್ಲ. ತಾಯಿ ಜಾಗ ಬದಲಿಸಿದ್ದಳು.

ಎಡ್ವರ್ಡ್ ಜೇಮ್ಸ್ (ಜಿಮ್) ಕಾರ್ಬೆಟ್ ಹೆಸರಿನ ಈ ಉದ್ಯಾನವನವನ್ನು ಅಲ್ಲಿನ ಡ್ಯಾಮಿನ ಹಿನ್ನೀರು, ರಾಮಗಂಗಾ ನದಿಯ ಚೆಲುವು, ಹಸಿರು ಬೆಟ್ಟಗಳ ಹಿನ್ನೆಲೆ, ಮತ್ತು ಗ್ರಾಸ್ ಲ್ಯಾಂಡ್ ಎಂಬ ಮೋಹಕ ಹುಲ್ಲುಗಾವಲು ಸಗ್ಗದಂತೆ ಮಾರ್ಪಡಿಸಿದೆ. ಆ ಕಾಲಕ್ಕೆ ನರಭಕ್ಷಕ ದೊಡ್ಡ ಹುಲಿ ಮತ್ತು ಚಿರತೆಗಳನ್ನು ಜಿಮ್ ಕಾರ್ಬೆಟ್ ಬೇಟೆಯಾಡಿದ್ದ ನೆನಪುಗಳಲ್ಲಿ ತಾಜಾಗೊಂಡವು. ಬ್ರಿಟಿಷ್ ಇಂಡಿಯನ್ ಆರ್ಮಿಯಲ್ಲಿ ಕರ್ನಲ್ ಶ್ರೇಣಿಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಬೆಟ್ ನಿಸರ್ಗಪ್ರಿಯನೂ ಆಗಿದ್ದ. ಸರ್ಕಾರದ ಕರೆಯ ಮೇರೆಗೆ ಮನುಷ್ಯರ ಪ್ರಾಣಕ್ಕೆ ಸಂಚಕಾರವಾದ ನರಭಕ್ಷಕ ಪ್ರಾಣಿಗಳನ್ನು ಆತ ಅನಿವಾರ್ಯವಾಗಿ ಶಿಕಾರಿ ಮಾಡಿದ ಹಾಗೆ ಕಾಣುತ್ತದೆ. ಕಾರ್ಬೆಟ್ ಓರ್ವ ಅತ್ಯಾಸಕ್ತಿಯ ಛಾಯಾಚಿತ್ರಗ್ರಾಹಕನೂ ಆಗಿದ್ದ. 'ಮ್ಯಾನ್ ಈಟರ್ಸ್ ಆಫ್ ಕುಮಾನ್' ಎಂಬ ಪುಸ್ತಕ ಇಲ್ಲಿನ ಘಟನೆಗಳನ್ನೇ ಆಧರಿಸಿ ಬರೆಯಲಾಗಿದೆ. ಈ ಉದ್ಯಾನವನಕ್ಕೆ 'ದಿ ಜಿಮ್ ಕಾರ್ಬೆಟ್ ನ್ಯಾಶನಲ್ ಪಾರ್ಕ್' ಎಂದು 1957ರಲ್ಲಿ ಹೆಸರಿಡುವ ಮುಂಚೆ ಈ ಕಾಡಿನ ಭಾಗಕ್ಕೆ 'ಕುಮಾನ್' ಎಂದು ಕರೆಯಲಾಗುತ್ತಿತ್ತು. ಇಂಡಿಯಾದ ವನ್ಯಜೀವವು ನಾಶವಾಗದೆ ಅದರ ಸಂರಕ್ಷಣೆ ಆಗಬೇಕೆಂದು ಕಾರ್ಬೆಟ್ ನಿಸ್ಸಂಕೋಚವಾಗಿ ಹೇಳಿದ್ದ ವ್ಯಕ್ತಿ. ಮೊದಲು ಕೊಂದವನೇ ಅದರ ಉಳಿಸುವಿಕೆಯ ಮಾತಾಡುವುದು ಅಚ್ಚರಿಯೂ, ಇತಿಹಾಸದ ಸತ್ಯವೂ ಆಗಿದೆ.

ಚಿತ್ರಗಳು ಲೇಖಕರವು

ಪ್ರತಿಕ್ರಿಯಿಸಿ: feedback@sudha.co.in

